ಮಾರಾಟದ ವಹಿವಾಟು ನಡೆಯುತ್ತದೆ. ಅಂದರೆ ಈ ಸಾಹಿತ್ಯದ ಜಾತ್ರೆ ಕನ್ನಡ ಪುಸ್ತಕೋದ್ಯಮದ ಪ್ರದರ್ಶನಕ್ಕೊಂದು ವೇದಿಕೆಯಾಗಿದೆ ಎಂದರ್ಥವಲ್ಲವೇ? ಅದಕ್ಕೆ ಸಾಹಿತ್ಯ ಸಮ್ಮೇಳನವೇಕೆ ಬೇಕು ಪುಸ್ತಕದ್ದೇ ಜಾತ್ರೆ ಮಾಡಿಬಿಡಬಹುದಲ್ಲವೇ ಎಂದು ವಾದಿಸಬಹುದು. ಅಂಥ ಜಾತ್ರೆಗಳೂ ನಡೆಯುತ್ತವೆ. ಆದರೆ ಅಲ್ಲಿ ಸಾಹಿತ್ಯ ಸಮ್ಮೇಳನದಲ್ಲಿ ನಡೆದಷ್ಟು ವ್ಯವಹಾರ ನಡೆಯುತ್ತದೆಯೇ ಎಂಬ ಪ್ರಶ್ನೆಯೂ ಇಲ್ಲಿದೆಯಲ್ಲವೇ?

ಇದನ್ನೂ ನಾವು 'ಜಾತ್ರೆ'ಯ ಪರಿಕಲ್ಪನೆಗೇ ಹೋಲಿಸಬಹುದು. ಜಾತ್ರೆಯಲ್ಲಿ ಉಳಿದೆಲ್ಲವೂ ಏಕೆ. ಬರೇ ಉತ್ಸವ ಮೂರ್ತಿಯ ತೇರೆಳೆಯುವ ಕಾರ್ಯಕ್ರಮಕ್ಕೆ ಸೀಮಿತಗೊಳಿಸಬಹುದಲ್ಲವೇ ಎಂಬ ಪ್ರಶ್ನೆಗಳನ್ನು ನಾವು ಕೇಳುವುದಿಲ್ಲ. ಏಕೆಂದರೆ ಜಾತ್ರೆಯ ಸಹಜ ವಿಕಾಸವನ್ನು ಒಪ್ಪಿಕೊಂಡಿದ್ದೇವೆ. ಆದರೆ ಸಾಹಿತ್ಯ ಸಮ್ಮೇಳನ ಸಹಜವಾಗಿಯೇ ಸಾಹಿತ್ಯದ ಜಾತ್ರೆಯಾಗಿ ವಿಕಾಸಗೊಂಡದ್ದನ್ನು ನಾವು ಒಪ್ಪುತ್ತಿಲ್ಲ ಅಷ್ಟೇ.

ಸಾಹಿತ್ಯ ಸಮ್ಮೇಳನಕ್ಕೆ ಲಕ್ಷಾಂತರ ಮಂದಿ ಬರುತ್ತಾರೆ. ಊಟದ ವಿಷಯವೇ ಮುಖ್ಯವಾಗಿಬಿಡುತ್ತದೆ ಎಂಬೆಲ್ಲಾ ಟೀಕೆಗಳನ್ನೊಮ್ಮೆ ವಿಶ್ಲೇಷಿಸೋಣ. ಲಕ್ಷಾಂತರ ಮಂದಿ ಭಾಗವಹಿಸುತ್ತಾರೆ ಎಂದರೆ ಅವರು ಊಟಕ್ಕಷ್ಟೇ ಬಂದಿರುವುದಿಲ್ಲ. ಸಮ್ಮೇಳನಗಳು ನಡೆಯುವ ಸಣ್ಣ ಊರುಗಳಲ್ಲಿ ಬಂದವರೆಲ್ಲರೂ ಹೋಟೆಲುಗಳಲ್ಲಿ ಉಣ್ಣಬೇಕೆಂದರೆ ಅದಕ್ಕೆ ವ್ಯವಸ್ಥೆಯೂ ಇರುವುದಿಲ್ಲ. ಕನಿಷ್ಠ ಈ ಕಾರಣಕ್ಕಾಗಿಯಾದರೂ ಊಟದ ವಿಚಾರ ಮುಖ್ಯವೇ. ಈ ಸಮ್ಮೇಳನಗಳು ಸಾಹಿತ್ಯಕ್ಕಷ್ಟೇ ಸೀಮಿತವಾಗಿ ನಡೆಯಬೇಕು. ಇಲ್ಲಿ ಸಾಹಿತ್ಯದ ಚರ್ಚೆಯಷ್ಟೇ ನಡೆಯಬೇಕು. ಈ ಚರ್ಚೆಗಳನ್ನು ಅರ್ಥ ಮಾಡಿಕೊಳ್ಳುವವರಷ್ಟೇ ಅದರಲ್ಲಿ ಭಾಗವಹಿಸಬೇಕು ಎಂಬ ವಿಧಿನಿಷೇಧಗಳನ್ನು ಹೇರುವಾಗ ಸಾಹಿತ್ಯವನ್ನು ಸಾಹಿತಿಗಳಿಗೂ, ಅದು 'ಅರ್ಥವಾಗುತ್ತದೆ' ಎಂದು ನಾವು ಭಾವಿಸಿರುವ ಜನಸಮುದಾಯವೊಂದಕ್ಕೆ ಸೀಮಿತಗೊಳಿಸುತ್ತಿರುತ್ತೇವೆ ಎಂಬುದನ್ನು ಮರೆತು ಬಿಡುತ್ತೇವೆ. ಅಪ್ಪ ಅಥವಾ ಅಮ್ಮನ ಹೆಗಲೇರಿ ತೇರಿಗೆ ಉತ್ತುತ್ತೆ ಮತ್ತು ಬಾಳೆಹಣ್ಣುಗಳನ್ನು ತೂರುವ ಮಗುವಿಗೆ ಜಾತ್ರೆಯಲ್ಲಿ ಮಾರುವ ಆಟಿಕೆಗಳ ಮೇಲೂ ಒಂದು ಕಣ್ಣಿರುತ್ತದೆ. ಸಾಹಿತ್ಯದ ಜಾತ್ರೆಗೆ ಬರುವ ಮಗುವಿಗೆ ಸದ್ಯದ ಮಟ್ಟಿಗೆ ಆಟಿಕೆಗಳನ್ನು ಮಾರುವ ಸ್ಥಳದಂತೆ ಕಂಡಿರಬಹುದು. ಆದರೆ ಬೆಳೆಯುತ್ತಾ ಅದು ಸಾಹಿತ್ಯದ ದೊಡ್ಡ ಲೋಕಕ್ಕೆ ಪ್ರವೇಶ ಪಡೆಯಬಾರದೆಂದೇನೂ ಇಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ಈ ಸಮ್ಮೇಳನದಲ್ಲಿ ದೊಡ್ಡ ಆಟಿಕೆ ಅಂಗಡಿಗಳೆಂದರೆ ಪುಸ್ತಕದ್ದು. ಪಠ್ಯ ಪುಸ್ತಕಗಳ ಹೊರತಾದ ಅಂಗಡಿಗಳನ್ನೇ ಕಾಣದ ಆ ಮಗುವಿಗೆ ಈ ಪುಸ್ತಕ ಲೋಕ ಹೊಸತೊಂದು ಜಗತ್ತನ್ನೇ ತೆರೆಯುವುದಿಲ್ಲವೇ?

ತುಂಬಾ ವ್ಯಾವಹಾರಿಕವಾಗಿ ಆಲೋಚಿಸಿದರೂ ಅರ್ಥವಾಗುವ ವಿಷಯವೊಂದಿದೆ. ಕರ್ನಾಟಕದಲ್ಲಿ ಜಾನುವಾರುಗಳಿಗಾಗಿಯೇ ನಡೆಯುವ ಹಲವು ಜಾತ್ರೆಗಳಿವೆ. ವಿವಿಧ ಉತ್ಪನ್ನಗಳ ಪ್ರಚಾರದ ಉತ್ಸವಗಳಿವೆ. ಕನ್ನಡ ಪುಸ್ತಕಗಳಿಗೆ ಸೀಮಿತವಾಗಿ ನಡೆಯುವ ವಾರ್ಷಿಕ ಜಾತ್ರೆಯೊಂದಿದ್ದರೆ ಅದು ಸಾಹಿತ್ಯ ಸಮ್ಮೇಳನ. ಅಲ್ಲಿ ಸಾಹಿತ್ಯ ಉತ್ಸವ ಮೂರ್ತಿ. ಅದರ ತೇರೆಳೆಯುವ ಕೆಲಸವನ್ನು ಸಾಹಿತ್ಯದ ಅಭಿಮಾನಿಗಳು/ಭಕ್ತರು ಮಾಡುತ್ತಾರೆ. ಉಳಿದವರು ಜಾತ್ರೆಯ ಭಾಗವಾಗುತ್ತಾರೆ!

ವೃತ್ತಿಯಲ್ಲಿ ಮಾನವ ಸಂಪನ್ಮೂಲ ತಜ್ಞೆಯಾಗಿರುವ ಲೇಖಕಿ ಕಳೆದ ಹತ್ತು ವರ್ಷಗಳಿಂದ ಕನ್ನಡ ಸಾಹಿತ್ಯ ಸಮ್ಮೇಳಗಳಲ್ಲಿ ಭಾಗವಹಿಸುತ್ತಾ ಅದರ ಸಾಂಸ್ಕೃತಿಕ ಆಯಾಮಗಳ ಕುರಿತು ತಿಳಿಯುವ ಪ್ರಯತ್ನ ನಡೆಸುತ್ತಿದ್ದಾರೆ.